ವಿಷಯ :- ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 837 (1078)

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಒಟ್ಟು ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ಹೊಸ ಕೈಗಾರಿಕಾ ಆರ್ಥಿಕ ನೀತಿಯಿಂದ 1995-96 ನೇ ಸಾಲಿನಲ್ಲಿ ಪ್ರಾರಂಭವಾಗಿರುವ ಸಣ್ಣ ಕೈಗಾರಿಕೆ ಸಂಖ್ಯೆ ಎಷ್ಟು?

ಇ) ಸಣ್ಣ ಕೈಗಾರಿಕೋದ್ಯಮಿಗಳಿಗೆ ನೀಡಬೇಕಾಗಿರುವ ಸಹಾಯಧನವೆಷ್ಟು?

ಈ) 1995-96 ನೇ ಸಾಲಿನಲ್ಲಿ ನೀಡಬೇಕಾದ ಸಹಾಯಧನ ಬಾಕಿ ಉಳಿದಂತಹ ಹಣ ಎಷ್ಟು?

ಶ್ರೀ ಬಿ. ಎ. ಮೊಯ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :-

ಅ) 1,75, 380.

ಆ) 11,856.

ಇ) ರೂ. 5065.95 ಲಕ್ಷ.

ಈ) ರೂ. 2865.95 ಲಕ್ಷ.

ವಿಷಯ :- ವಿಕ್ರಾಂತ್ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸಿ ಕೊಡುತ್ತಿರುವ ಬಗ್ಗೆ ತೀರ್ಮಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 838 (1315)

ಶ್ರೀ ಹೆಚ್. ಎನ್. ಶಂಕರಲಿಂಗೇಗೌಡ (ಚಾಮರಾಜ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಮೂಲಭೂತ ಸೌಕರ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಕ್ರಾಂತ್ ಕಾರ್ಖಾನೆ ಕರ್ನಾಟಕ ಟೆಲಿಕಾಂ ಲಿಮಿಟೆಡ್, ಚಾಮುಂಡಿ ಮೆಷಿನ್‌ಟೂಲ್ಸ್ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸುವ ಬಗ್ಗೆ ಸರ್ಕಾರದವರು ತೀರ್ಮಾನಿಸಿರುವರೇ;

ಅ) ಹಾಗಿದ್ದಲ್ಲಿ ಕಾರಣಗಳೇನು ;

ಇ) ಆಗಿದ್ದರೆ, ಈ ಕಾರ್ಖಾನೆಗಳ ಕಾರ್ಮಿಕರ ಭಾವನೆಗಳನ್ನು ಸರ್ಕಾರದವರು ಗಣನೆಗೆ ತೆಗೆದುಕೊಂಡಿರುವರೇ ;

ಈ) ಈ ಕಾರ್ಖಾನೆಗಳ ಕಾರ್ಮಿಕ ಸೇವಾ ಭದ್ರತೆಯ ಖಾತರಿ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಮೂಲಭೂತವಾದ ಸೌಕರ್ಯಗಳ ಸಚಿವರು) :-

ಅ) ಹೌದು.

ಆ) ವಿಕ್ರಾಂತ್ ಟಯರ್ ಲಿಮಿಟೆಡ್ ಸಂಸ್ಥೆಯು ಒಂದು ಸರ್ಕಾರಿ ಕಂಪನಿಯಲ್ಲ, ಏಕೆಂದರೆ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿ. ಮತ್ತು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ನಿಯಮಿತ ಸಂಸ್ಥೆಗಳು ಈ ಕಂಪನಿಯಲ್ಲಿ ಶೇ. 43 ರಷ್ಟು ಷೇರುಗಳನ್ನು ಮಾತ್ರ ಹೊಂದಿವೆ. ಈ ಕಂಪನಿಯು ಸತತವಾಗಿ 1992-93, 1993-94 ಮತ್ತು 1995-96 ನೇ ಸಾಲಿನಲ್ಲಿ ನಷ್ಟವನ್ನು ಅನುಭವಿಸಿದೆ. ಯಂತ್ರೋಪಕರಣಗಳ ಬದಲಾವಣೆ ಹಾಗೂ ಆಧುನೀಕರಣಗಳಿಗಾಗಿ ಕನಿಷ್ಟ 130.00 ಕೋಟಿ ರೂ. ಗಳು ಬೇಕಾಗಬಹುದೆಂದು ಕಂಪನಿ ಅಂದಾಜು ಮಾಡಿದೆ. ಕಂಪನಿಯ ಪ್ರಸ್ತುತ ಪ್ರಮೋಟರುಗಳಾದ ಕೆ.ಎಸ್.ಐ.ಐ.ಡಿ.ಸಿ. ಅಥವಾ ಕರ್ನಾಟಕ ಸರ್ಕಾರವು ಈ ಗಾತ್ರದ ಸಂಪನ್ಮೂಲ ಕ್ರೋಢೀಕರಣ ಮಾಡುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಒಂದು ಖಾಸಗೀ ಕಂಪನಿಯೊಂದಿಗೆ ಯೋಜಿತ ರೀತಿಯಲ್ಲಿ ಜೊತೆಗೂಡಿ ಅವರಿಗೆ ಶೇ. 51 ರಷ್ಟು ಷೇರುಗಳನ್ನು ನೀಡಿ ಕಂಪನಿಯ ಆಡಳಿತವನ್ನು ವಹಿಸಿ ಕೊಡಬೇಕೆಂದು ಸರ್ಕಾರದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

2) ಕರ್ನಾಟಕ ಟೆಲಿಕಾಂ ನಿಯಮಿತ ಸಂಸ್ಥೆಯನ್ನು ಖಾಸಗೀಕರಣಗೊಳಿಸಲು ಮುಖ್ಯವಾದ ಕಾರಣಗಳೇನೆಂದರೆ :

(1) ಸದರಿ ಕಾರ್ಖಾನೆಯು 1994-95ರ ಸಾಲಿನಿಂದ ಸತತವಾಗಿ ನಷ್ಟವನ್ನು ಅನುಭವಿಸುತ್ತಿದೆ. (1994-95 ರಲ್ಲಿ ರೂ. 314.92 ಲಕ್ಷಗಳು ಹಾಗೂ 1995-96 ರಲ್ಲಿ ರೂ. 623.07 ಲಕ್ಷಗಳು).

(2) ಕೆ.ಟಿ.ಎಲ್. ಸಂಸ್ಥೆಯು ಪರಿವರ್ತಿತವಾಗಿರುವ ಕೇಂದ್ರ ಸರ್ಕಾರದ ಉದಾರೀಕರಣ ನೀತಿ ಮತ್ತು ಪ್ರಪಂಚದ ಇತರೇ ಉದ್ದಿಮೆದಾರರಿಗೆ ರಾಷ್ಟ್ರದಲ್ಲಿ ನೀಡಿರುವಂತಹ ಪ್ರವೇಶಗಳಿಂದಾಗಿ ದೂರಸಂಪರ್ಕ ಉಪಕರಣಗಳ ಉದ್ದಿಮೆಯಲ್ಲಿ ಹೆಚ್ಚಿನ ಬದಲಾವಣೆಗಳು ಉಂಟಾಗಿ ಕಷ್ಟದ ಸ್ಥಿತಿಯಲ್ಲಿ ಸಿಲುಕಿಕೊಂಡಿದೆ. ದೂರ ಸಂಪರ್ಕ ಇಲಾಖೆಯ ನೀತಿಗಳು ಸಹ ಕೆ.ಟಿ.ಎಲ್. ಸಂಸ್ಥೆಯ ಇಂದಿನ ದುಸ್ಥಿತಿಗೆ ಕಾರಣವಾಗಿದೆ.

3) ಚಾಮುಂಡಿ ಮೆಷಿನ್‌ಟೂಲ್ಸ್ ಸಂಸ್ಥೆಯು ಪ್ರಾರಂಭದಿಂದಲೂ ನಷ್ಟವನ್ನು ಅನುಭವಿಸುತ್ತಿದ್ದು ಸಂಚಿತ ನಷ್ಟವು 31-3-1995 ಕ್ಕೆ 291.60 ಲಕ್ಷ ರೂ. ಗಳಾಗಿದೆ. ಇದಲ್ಲದೆ, ಈ ಸಂಸ್ಥೆಯು ಮಾರಾಟ ತೆರಿಗೆ ಇತರೇ ಸಾಲಗಳು 227.53 ಲಕ್ಷ ರೂ. ಗಳಾಗಿದೆ. ಕಂಪನಿಯ ನಿವ್ವಳ ಬೆಲೆಯು (-) 215.69 ಲಕ್ಷ ರೂ. ಗಳಾಗಿವೆ. ಮೆಷಿನ್‌ಗಳಿಗೆ ಬೇಡಿಕೆ ಕ್ಷೀಣಿಸಿರುತ್ತದೆ, ಹಾಗೂ ತಾಂತ್ರಿಕ ಉನ್ನತೀಕರಣ ಮತ್ತು ವೈವಿದ್ಯೀಕರಣ ಇಲ್ಲದೆ ಇರುವುದರಿಂದ ಈ ಸಂಸ್ಥೆಯು ನಷ್ಟವನ್ನು ಅನುಭವಿಸುತ್ತಿವೆ.

ಇ) 1) ವಿಕ್ರಾಂತ್ ಟಯರ್ಸ್ ಉದ್ಯೋಗಿಗಳ ಸಂಘದ ಪದಾಧಿಕಾರಿಗಳ ಮೂಲಕ ಕಂಪನಿಯ ಕಾರ್ಮಿಕರಿಗೆ ಈ ಪ್ರಸ್ತಾವನೆಯನ್ನು ತಿಳಿಸಲಾಗಿದೆ. ಔಪಚಾರಿಕವಾಗಿ ಕಾರ್ಮಿಕರಿಂದ ಈ ಪ್ರಸ್ತಾವನೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

2) ಕೆ.ಟಿ.ಎಲ್. ಕಂಪನಿಯ ಕಾರ್ಮಿಕರ ಭಾವನೆಗಳನ್ನು ಗಣನೆಗೆ ತೆಗೆದು ಕೊಂಡು ಈ ಕಾರ್ಖಾನೆಯನ್ನು ತೆಗೆದುಕೊಳ್ಳಲು ಬಯಸುವ ಖಾಸಗೀ ಉದ್ದಿಮೆದಾರರಿಗೆ ಕಾರ್ಮಿಕ ಸೇವಾ ಭದ್ರತೆಯ ಖಾತರಿ ಬಗ್ಗೆ ಸೂಕ್ತ ವಾದ ನಿಬಂಧನೆಗಳನ್ನು ತಿಳಿಸಲಾಗಿದೆ.

3) ಚಾಮುಂಡಿ ಮೆಷಿನ್ ಟೂಲ್ಸ್ ಬಗ್ಗೆ ಪ್ರಶ್ನೆ (ಅ)) ಗೆ ನೀಡಿದ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಈ) 1) ಆಸಕ್ತ ಕಂಪನಿಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸುವ ಸಂದರ್ಭದಲ್ಲಿ ವಿ.ಟಿ.ಎಲ್.ನ ಹಾಲಿ ಇರುವ ಎಲ್ಲಾ ಉದ್ಯೋಗಿಗಳ ಸೇವೆಗೆ ಯಾವುದೇ ರೀತಿಯ ಚ್ಯುತಿ ಬರದಂತೆ ರಕ್ಷಣೆ ನೀಡಬೇಕೆಂದು ಕೆ.ಎಸ್.ಐ.ಐ.ಡಿ.ಸಿ.ಯು ಮನದಟ್ಟು ಮಾಡಿಕೊಟ್ಟಿದೆ. ಆದ್ದರಿಂದ ಈ ವಿಷಯದ ಬಗ್ಗೆ ಉದ್ಯೋಗಗಳಲ್ಲಿ ಯಾವುದೇ ರೀತಿಯ ಆತಂಕಕ್ಕೆ ಕಾರಣವಿಲ್ಲ.

2) ಕೆ.ಟಿ.ಎಲ್. ಕಾರ್ಖಾನೆಯ ಕಾರ್ಮಿಕರ ಸೇವಾ ಭದ್ರತೆಯ ಖಾತರಿ ಬಗ್ಗೆ ಸೂಕ್ತವಾದ ನಿಬಂಧನೆಗಳನ್ನು ಮುಂದೆ ಈ ಕಾರ್ಖಾನೆಯನ್ನು ತೆಗೆದುಕೊಳ್ಳಲು ಬಯಸುವ ಖಾಸಗೀ ಉದ್ದಿಮೆದಾರರಿಗೆ ತಿಳಿಸಲಾಗಿದೆ. ಆದರಂತೆ ಅಂತಹ ಖಾಸಗೀ ಉದ್ದಿಮೆದಾರರು ಈ ಎಲ್ಲಾ ನೌಕರರಿಗೂ ಉದ್ಯೋಗವನ್ನು ಮುಂದುವರಿಸಿಕೊಂಡು ಹೋಗುವುದು ಕಡ್ಡಾಯವಾಗಿದೆ.

3) ಚಾಮುಂಡಿ ಮೆಷಿನ್‌ಟೂಲ್ಸ್ ಕಂಪನಿ ಬಗ್ಗೆ ಪ್ರಶ್ನೆ (ಅ) ಗೆ ನೀಡಿದ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಅನ್ವಯಿಸುವುದಿಲ್ಲ.